8) ಕ್ರೈಂ: 17:98	: ಬೆಳ್ಳಿಬಂಗಾರ	ರೂ.	2,00,000-00
ಶ್ರೀ ಜಿ.ಟಿ.ಗೌಡ,	ನಗದು	ರೂ.	1.500-00
ಕಾರ್ಯದರ್ಶಿ, ಮಂಡಲ	ರಾಷ್ಟ್ರೀಯ ಪ್ರಮಾಣ		
ಪಂಚಾಯ್ತಿ, ಸಿದ್ದಲಿಂಗಪುರ	ಪತ್ರ	ರೂ.	31,500-00
ಮೈಸೂರು ತಾಲ್ಲೂಕು.	ಮೈಸೂರು ನಗರದಲ್ಲಿ		
	ವಿದ್ಯುತ್ ಉಪಕರಣ	ರೂ.	60,000-00
	ಮನೆಬೆಲೆ	ರೂ.	10,00,000-00
	ಮಾರುತಿ ಕಾರು-800	ರೂ.	95,000-00
	ಪೀಠೋಪಕರಣ	ರೂ.	1,64,000-00

ಹೊನ್ನಾವರ ತಾಲ್ಲೂಕಿನ ಖರ್ವಾ ಏತನೀರಾವರಿ ಯೋಜನೆ ಬಗ್ಗೆ

314 (93) ಶ್ರೀ ಶಿವಾನಂದ ನಾಯಕ್ (ಭಟ್ಕಳ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾವರ ತಾಲ್ಲೂಕು ಖರ್ವಾ ಏತ ನೀರಾವರಿ ಯೋಜನೆಯ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೇಯೇ;

ಆ) ಖರ್ವಾ ಏತ ನೀರಾವರಿ ಯೋಜನೆಯ ಅಂದಾಜು ವೆಚ್ಚ ಎಷ್ಟು;

ಇ) ಈ ಯೋಜನೆಯ ಅವಶ್ಯಕತೆಯು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಈ ಯೋಜನೆಗೆ ಎಂದಿನಿಂದ ಮಂಜೂರಾತಿ ನೀಡಲಾಗುವುದು?

ಶ್ರೀ ತಿಪ್ಪೇ ಸ್ವಾಮಿ ಸಣ್ಣ (ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಈ ಯೋಜನೆಯು 1998-99ನೇ ಸಾಲಿನಆಯವ್ಯಯದಲ್ಲಿ ಸೇರಿದೆ.

ಆ) 60.00 ಲಕ್ಷ ರೂ.ಗಳು

ಇ) ಬಂದಿದೆ.

ಈ) 1998-99ರ ಸಾಲಿನ ಆಯವ್ಯಯದಲ್ಲಿ 1.01 ಲಕ್ಷ ರೂ.ಗಳ ಸಾಂಕೇತಿಕ ಅನುದಾನ ಹೊಂದಿದ ಈ ಪ್ರಸ್ತಾವನೆಯನ್ನು 1999-2000ನೇಸಾಲಿನಲ್ಲಿ ಪ್ರತಿಶತ 30 ರಷ್ಟು ಅನುದಾನದೊಂದಿಗೆ ಸೇರ್ಪಡಿಸಲು ಉದ್ದೇಶ ಹೊಂದಿದೆ. ನಿಯಮಗಳನ್ನು ಪರಿಶೀಲಿಸಿದ ನಂತರ 1999- 2000ರ ಸಾಲಿನಲ್ಲಿ ಅನುಮತಿ ನೀಡಲಾಗುವುದು.

ಭಟ್ಕಳ ಗಲಭೆಯಲ್ಲಿ ಡಾ.ಯು.ಚಿತ್ತರಂಜನ್‌ರವರು ಹತ್ಯೆ ಗೀಡಾಗಿದ್ದರ ಬಗ್ಗೆ ವಿಚಾರಣೆ

315 (95) ಶ್ರೀ ಶಿವಾನಂದ ನಾಯಕ್ (ಭಟ್ಕಳ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1993ರ ಭಟ್ಕಳ ಗಲಭೆಯಲ್ಲಿ ಡಾ॥ ಯು.ಚಿತ್ತರಂಜನ್‌ರವರು ಹತ್ಯೆ ಗೀಡಾಗಿದ್ದರ ಬಗ್ಗೆ ವಿಚಾರಣೆನಡೆಸಲು ನೇಮಿಸಿದ ತನಿಖಾ ಆಯೋಗದ ವರದಿಯನ್ನು ಇದು ವರೆಗೆ ಸದನದಲ್ಲಿ ಮಂಡಿಸದಿರಲು ಕಾರಣಗಳೇನು?

ಆ) ಕಳೆದ ಅಧಿವೇಶನದಲ್ಲಿ ಈ ಬಗ್ಗೆ ನೀಡಿದ್ದ ಆಶ್ವಾಸನೆಯನ್ನು ಕಾರ್ಯಗತಗೊಳಿಸದಿರಲು ಕಾರಣಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಗೃಹ ಸಚಿವರು) :

ಅ) 1993ರ ಭಟ್ಕಳ ಗಲಭೆಯಲ್ಲಿ ಡಾ॥ ಯು. ಚಿತ್ತರಂಜನ್ ಹತ್ಯೆಗೀಡಾಗಿದ್ದರು ಎಂದು ಪ್ರಶ್ನೆಯಲ್ಲಿ ಸೂಚಿಸಿದ್ದು, ಅದು ಸರಿಯಲ್ಲ, ದಿನಾಂಕ 10-4-1999ರಂದು ಡಾ॥ಯು.ಚಿತ್ತರಂಜನ್‌ರವರ ನಿವಾಸದಲ್ಲಿಅವರ ಹತ್ಯೆಆಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ವಿಚಾರಣೆನಡೆಸಲು ನ್ಯಾಯಮೂರ್ತಿ ಕೆ.ರಾಮಚಂದ್ರಯ್ಯ ವಿಚಾರಣಾ ಆಯೋಗವನ್ನು ರಚಿಸಲಾಗಿತ್ತು. ಸದರಿ ಆಯೋಗವು ತನ್ನ ವರದಿಯನ್ನು ದಿನಾಂಕ 31-3-1998ರಂದು ಸರ್ಕಾರಕ್ಕೆ ಸಲ್ಲಿಸಿದೆ. ವರದಿಯನ್ನು ಪರಿಶೀಲಿಸುತ್ತಿದ್ದು ಸದ್ಯದಲ್ಲೇ ತೀರ್ಮಾನ ಕೈಗೊಳ್ಳಲಾಗುವುದು. ನಂತರ ಸದನದಲ್ಲಿ ಮಂಡಿಸಲು ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

ಆ) ವರದಿಯನ್ನು ಸರ್ಕಾರವು ತೀವ್ರವಾಗಿ ಪರಿಶೀಲಿಸುತ್ತಿದೆ.

ಮಂಕಿ ಏತ ನೀರಾವರಿ ಯೋಜನೆ

316 (98) ಶ್ರೀ ಶಿವಾನಂದ ನಾಯಕ್ (ಭಟ್ಕಳ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಕಿ ಏತ ನೀರಾವರಿ ಯೋಜನೆಗೆ ಸಾಂಕೇತಿಕ ಅನುದಾನ(ಟೋಕನ್ ಗ್ರಾಂಟ್) ಒದಗಿಸಲಾಗಿದೆಯೇ;

ಆ) 1998ರ ಬಜೆಟ್ ಅಧಿವೇಶನದಲ್ಲಿ ಮಾನ್ಯ ಸಚಿವರು ಸ್ಥಳ ಪರಿಶೀಲಿಸಿ ಮಂಕಿ ಏತ ನೀರಾವರಿ ಯೋಜನೆಗೆ ಮಂಜೂರಾತಿ ನೀಡುವುದಾಗಿ ಆಶ್ವಾಸನೆ ನೀಡಿದ್ದು, ಸರ್ಕಾರದ ಗಮನದಲ್ಲಿದೆಯೇ;

ಇ) ಹಾಗಿದ್ದಲ್ಲಿ ಈ ಯೋಜನೆಯ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಮಂಕಿ ಏತ ನೀರಾವರಿ ಯೋಜನೆಗೆ 1997-98ನೇ ಸಾಲಿಗೆ ರೂ.0.01ಲಕ್ಷ ಹಾಗೂ 1998-99ನೇ ಸಾಲಿಗೆ ರೂ.0.01ಲಕ್ಷ ಸಾಂಕೇತಿಕ ಅನುದಾನ ಒದಗಿಸಲಾಗಿದ್ದು, ಆ ಹಣವನ್ನು ಇಡುಗಂಟಿಗೆ ಸೇರಿಸಲಾಗಿದೆ.

ಆ) ಸರ್ಕಾರದ ಗಮನದಲ್ಲಿದೆ.

ಇ) ಸದರಿ ಏತ ನೀರಾವರಿ ಯೋಜನೆ ಕುರಿತು ಮರುಸರ್ವೆಕಾರ್ಯ ಪ್ರಗತಿಯಲ್ಲಿದ್ದು, 1999-2000 ಆಯವ್ಯಯದಲ್ಲಿ ಸೂಕ್ತ ಅನುದಾನ ದೊಂದಿಗೆ ಸೇರಿಸಲು ಪ್ರಯತ್ನಿಸಲಾಗುವುದು.